ಇಂದು ದಿಃ**15-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಎಂ.ಕೆ ವಕೀಲರಿಂದ ಪ್ರತಿವಾದಿ ಪರಃ**

ವಾದಿ ವಿನಾಯಕ ನಗರ ಕ್ಯಾಂಪ್ ನ ವಾಸಿ ಇರುತ್ತಾರೆ, ನಮ್ಮೂರಿನಿಂದ ವಿನಾಯಕನಗರ ಕ್ಯಾಂಪ್ 1 ವರೆ ಕೀ.ಮೀ ಅಂತರದಲ್ಲಿ ಇದೆ. ನನಗೆ ವಾದಿಯ ಪರಿಚಯ ಸುಮಾರು 25 ವರ್ಷಗಳಿಂದ ಇದೆ. ನನಗೆ ಪ್ರತಿವಾದಿಯ ಪರಿಚಯ ಸಹ ಇದೆ. ಕ್ರಯದ ಕರಾರು ಪತ್ರ ಆಗಿರುವ ಜಮೀನಿನ ಸರ್ವೆ ನಂಬರ್ 202/6 ಮತ್ತು ವಿಸ್ತೀರ್ಣ 11 ವರೆ ಗುಂಟೆ ಇರುತ್ತದೆ. ಪ್ರತಿವಾದಿಗೆ ಎಷ್ಟು ಜನ ಸಹೋದರ ಸಹೋದರಿಯರು ಇದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಪ್ರತಿವಾದಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ನಾನು ನೋಡಿದ್ದೇನೆ. ಪ್ರತಿವಾದಿ ಈ 11 ವರೆ ಗುಂಟೆ ಜಮೀನಿನಲ್ಲಿ ಒಂದು ಆಶ್ರಮ ಮಾಡಿದ್ದಾರೆ ಎಂದರೆ ಸರಿ. ಈ ಸಂಪೂರ್ಣ 11 ವರೆ ಗುಂಟೆಗೆ ಕಾಪೌಂಡ್ ಗೋಡೆ ಕಟ್ಟಿದ್ದಾರೆ ಎಂದರೆ ಸರಿ. ಈ ಆಶ್ರಮಕ್ಕೆ ಸ್ವರೂಪ ಆಶ್ರಮ ಎಂದು ಹೆಸರು ಕೊಟ್ಟಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ಸಾಕಷ್ಟು ಜನ ಅನುಯಾಯಿಗಳು ಇದ್ದಾರೆ ಎಂದರೆ ಸಾಕ್ಷಿ ಸ್ವಲ್ಪ ಜನ ಇದ್ದಾರೆ ಎಂದು ಹೇಳುತ್ತಾರೆ. ಆಶ್ರಮದಲ್ಲಿ ಪಾಠ ಪ್ರವಚನ ಮಾಡುತ್ತಾರೆ ಎಂದರೆ ಸಾಕ್ಷಿ ಭಾನುವಾರ ಮಾತ್ರ ಮಾಡುತ್ತಾರೆ ಎಂದು ಹೇಳುತ್ತಾರೆ.

ವಿನಾಯಕನಗರ ಕ್ಯಾಂಪ್ ವಾಸಿಗಳಾದ ಎನ್.ಪ್ರಸಾದ್ ರಾವ್, ನಾಗೇಶ್ ರಾವ್, ಕೊಟ್ಟಪಲ್ಲಿ ಸುಬ್ಬರಾವ್, ವಿಷ್ಣುಮೂರ್ತಿ ಅಲಿಯಾಸ್ ಹುಲಿಗೇಶ್ ಇವರ ಪರಿಚಯ ನನಗೆ ಇದೆ. ಇವರು ಸಹ ಸುಮಾರು 25-30 ವರ್ಷಗಳಿಂದ ಪರಿಚಯ ಇದ್ದಾರೆ. ಈ ಜನ ಮತ್ತು ಉಳಿದ ಗ್ರಾಮಸ್ಥರು ಹಾಗೂ ವಾದಿ ಸೇರಿ ಈ 11 ವರೆ ಗುಂಟೆಯಲ್ಲಿ ಚೌಡೇಶ್ವರಿ ದೇವಸ್ಥಾನಕ್ಕೆ ಸೇರಿದ ಜಾಗ ಇದೆ ಎಂದು ತೊಂದರೆ

ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ರೀತಿ ತೊಂದರೆ ಕೊಡಬಾರದು ಎಂದು ಹೇಳಿ, ಪ್ರತಿವಾದಿ ಅಸಲು ದಾವಾ ನಂಬರ್ 229/2014 ಇದನ್ನು ಪ್ರತಿಬಂಧಕ ಆಜ್ಞೆ ಕೇಳಿ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಾದಿ ಮತ್ತು ಮೇಲೆ ಹೇಳಿದ ಉಳಿದ ವ್ಯಕ್ತಿಗಳ ಪರವಾಗಿ ಸಾಕ್ಷಿ ಹೇಳಿದ್ದೆನು ಎಂದರೆ ಸರಿ. ಈ ದಾವೆಯನ್ನು ಪ್ರತಿವಾದಿ ದಾಖಲು ಮಾಡಿದ ನಂತರ, ಊರಿನಲ್ಲಿ ಗಲಾಟೆಯಾಯಿತು ಎಂದರೆ ಸಾಕ್ಷಿ ಕೇಳಿದ್ದೇನೆ, ನಾನು ನೋಡಿಲ್ಲ ಎಂದು ಹೇಳುತ್ತಾರೆ. ಈ ಗಲಾಟೆಯಾದ ನಂತರ, ಪ್ರಕ್ಷುಬ್ಧ ವಾತವರಣ ಉಂಟಾಗಿ, ಊರಿನಲ್ಲಿ ತಹಶೀಲ್ದಾರ್ ಮತ್ತು ಪೋಲೀಸರು ಠಿಕಾಣಿ ಹೂಡಿದ್ದರು ಎಂದರೆ ಗೊತ್ತಿಲ್ಲ. ಈ 11 ವರೆ ಗುಂಟೆಯಲ್ಲಿ ಚೌಡೇಶ್ವರಿ ದೇವಸ್ಥಾನದ ಜಾಗ ಇದೆ ಎಂದು ಹೇಳಿ ವಾದಿ, ಆತನ ಸಹೋದರ ಮತ್ತು ಉಳಿದ ಗ್ರಾಮಸ್ಥರು ಸೇರಿ ಪ್ರತಿವಾದಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ಗಟನೆಗೆ ಸಂಬಂಧಿಸಿದಂತೆ ಕ್ರಿಮೀನಲ್ ಪ್ರಕರಣ ಆಗಿ ವಾದಿ ಸಹ ಅದರಲ್ಲಿ ಆರೋಪಿ ಇದ್ದನು ಎಂದರೆ ಗೊತ್ತಿಲ್ಲ.

ದಿನಾಂಕಃ11-11-2014 ರಲ್ಲಿ ಈ ಕ್ರಯದ ವ್ಯವಹಾರ ಆಗಿರುತ್ತದೆ. ಈ ಕ್ರಯದ ವ್ಯವಹಾರ ಆದಾಗ ಪ್ರತಿವಾದಿ, ವಿಲಾಸ್‌ಲದ್ವ, ಚಿಲಕುರಿ ಗಂಗಾರಾಜ್, ನೆಕ್ಕಟ್ಟಿದೋರಯ್ಯ ಹಾಗೂ ನಾನು ಇದ್ದೇವು. ಇಷ್ಟು ಜನ ಇದ್ದೇವು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿದ್ದೇನೆ. ಈ ಕ್ರಯದ ವ್ಯವಹಾರ ಆಯಿತು ಎಂದು ಹೇಳುವ ಸಮಯದಲ್ಲಿ ಪ್ರತಿವಾದಿ ದಾಖಲು ಮಾಡಿದ್ದ ದಾವೆ ಚಾಲ್ತಿಯಲ್ಲಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಚೌಡೇಶ್ವರಿ ದೇವಸ್ಥಾನದ ಜಾಗ ಮತ್ತು ಸ್ವರೂಪ ಆಶ್ರಮದ ಜಾಗದ ತಂಟೆಯನ್ನು ಸರ್ಕಾರಿ ಅಧಿಕಾರಿಗಳು ಸರಿ ಮಾಡಲು ಪ್ರಯತ್ನ ಮಾಡಿದರು ಎಂದರೆ ಗೊತ್ತಿಲ್ಲ. ಪೋಲೀಸರು ಮತ್ತು ತಹಶೀಲ್ದಾರ್ ಬಂದಿದ್ದ ವಿಷಯ ನನಗೆ ಗೊತ್ತಿದೆ. ಪ್ರತಿವಾದಿಗೆ ಪೋಲೀಸರು ಮತ್ತು ತಹಶೀಲ್ದಾರ್

ಇವರು ಈ ಜಾಗವನ್ನು ಚೌಡೇಶ್ವರಿ ದೇವಸ್ಥಾನಕ್ಕೆ ಬರೆದುಕೊಡಿ ಎಂದು ಒತ್ತಾಯ ಮಾಡಿದರು ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಒತ್ತಾಯಕ್ಕೆ ಮಣಿಯಲಿಲ್ಲ ಮತ್ತು ಇದು ಆಶ್ರಮದ ಜಾಗ ಎಂದು ಹೇಳಿದರು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಊರಿನ ಗ್ರಾಮಸ್ಥರು, ಪ್ರತಿವಾದಿ, ಪೋಲೀಸರು ಮತ್ತು ತಹಶೀಲ್ದಾರ್ ಅಲ್ಲಿ ಇದ್ದರು ಎಂದರೆ ಗೊತ್ತಿಲ್ಲ.

ಊರಿನ ಗ್ರಾಮಸ್ಥರು, ಪೋಲೀಸರು ಮತ್ತು ತಹಶೀಲ್ದಾರ್ ಸೇರಿ ಒಂದು ಖೊಟ್ಟಿ ದಾಖಲೆಯನ್ನು ಸೃಷ್ಠಿ ಮಾಡಿದರು ಎಂದರೆ ಸರಿಯಲ್ಲ. ಈ ಖೊಟ್ಟಿ ದಾಖಲೆ ಸೃಷ್ಠಿ ಮಾಡಿಕೊಂಡು ಪೋಲೀಸರು ಅದನ್ನು ಪೇಪರ್ ನಲ್ಲಿ ಹಾಕಿದರು ಎಂದರೆ ಸಾಕ್ಷಿ ಹಾಕಿರ ಬಹುದು ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.